## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 92/2018**

| | | |
|---|---|---|
| ಸಾಕ್ಷಿದಾರರ ಹೆಸರು | : ಮಲ್ಲರಾಜು ಎಂ. | ಪಿಡಬ್ಲ್ಯೂ : 10 |
| ತಂದೆಯ / ಗಂಡನ ಹೆಸರು | : ಮಲ್ಲಯ್ಯ | |
| ವಯಸ್ಸು | : 56 ವರ್ಷ | |
| ಉದ್ಯೋಗ | : ಹೆಚ್ ಸಿ ನಂ. 509, ಲಶ್ಕರ್ ಪಿಎಸ್ | |
| ವಾಸಸ್ಥಳ | : ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 18.11.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ದಂಡ ಪ್ರಕ್ರಿಯ ಸಂಹಿತೆಯ ಕಲಂ 299 ರಡಿ ಸಾಕ್ಷಿಯ ವಿಚಾರಣೆಃ**

ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ನಾನು ಮಾರ್ಚ 2021 ರಿಂದ ಈವರೆವಿಗೂ ನಾನು ಮೈಸೂರಿನ ಲಶ್ಕರ್ ಪೋಲೀಸ್ ಠಾಣೆಯಲ್ಲಿ ಹೆಚ್ ಸಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ದಿಃ 16.10.2023 ರಂದು ಆರೋಪಿಗೆ ಸಂಬಂಧಪಟ್ಟ ಸ್ಥಿರಾಸ್ತಿಗಳ ವಿವರಗಳನ್ನು ಪಡೆಯಲು ನ್ಯಾಯಾಲಯ ನೀಡಿದ ವಾರೆಂಟ್ ನ್ನು ಪಡೆದಿರುತ್ತೇನೆ. ದಿಃ 30.10.2023 ರಂದು ನಾನು ತಮಿಳುನಾಡಿನ ಪಾಲಿಕೂಂಡಂ, ವೆಲ್ಲೂರು ತಾಲ್ಲೂಕು ಮತ್ತು ಜಿಲ್ಲೆ, ಗೆ ಹೋಗಿ ಪಾಲಿಕೊಂಡಂ ಪೋಲೀಸ್ ಠಾಣೆಗೆ ಹೋಗಿ ಅಲ್ಲಿ ಆರೋಪಿಯ ಕುರಿತು ಮತ್ತು ಆತನ ಸ್ಥಿರಾಸ್ತಿಗಳ ವಿವರಗಳನ್ನು ಪಡೆಯಲು ನ್ಯಾಯಾಲಯ ನೀಡಿದ್ದ ವಾರೆಂಟ್ ನ ಕುರಿತು ತಿಳಿಸಿದೆ. ಅವರು

ನನ್ನನ್ನು ವೆಲ್ಲೂರು ಜಿಲ್ಲೆಯ ಆನ್ಯೆಕಟ್ಟ ತಾಲ್ಲೂಕು , ಕೈಲಾಚೂರ್ ನ **VAO** (**Village Administrative Officer**) ರವರ ಬಳಿಗೆ ಕರೆದುಕೊಂಡು ಹೋದರು. ಅವರಲ್ಲಿ ನಾನು ಆರೋಪಿಯ ಸ್ಥಿರಾಸ್ತಿಯ ಕುರಿತು ಮಾಹಿತಿ ನೀಡುವಂತೆ ಮನವಿ ಪತ್ರ ನೀಡಿದೆ. ನಂತರ ಸದರಿಯವರು ದಾಖಲಾತಿಗಳನ್ನು ಪರಿಶೀಲಿಸಿ ಆರೋಪಿ ಶಾಹೀದ್ ಪಾಷ ಬಿನ್ ಮೊಹಮದ್ ನ ಹೆಸರಿನಲ್ಲಿ ಯಾವುದೇ ಚಿರಾಸ್ದಿಗಳು ಇರುವುದಿಲ್ಲ ಎನ್ನುವ ಮಾಹಿತಿಯನ್ನು ಲಿಖಿತವಾಗಿ ನೀಡಿದರು. ಅದನ್ನು ಪಡೆದು ಪುನಃ ನಮ್ಮ ಠಾಣೆಗೆ ಹಾಜರಾಗಿ, ಠಾಣಾಧಿಕಾರಿಯವರಿಗೆ ತಿಳಿಸಿ, ದಿಃ 31.10.2023 ರಂದು ನ್ಯಾಯಾಲಯಕ್ಕೆ ನಿವೇದಿಸಿಕೂಂಡಿರುತ್ತೇನೆ.

3. ನ್ಯಾಯಾಲಯ ನೀಡಿದ ವಾರೆಂಟ್ ನ್ನು ನೋಡುತ್ತಿದ್ದೇನೆ. ಅದನ್ನು ನಿಪಿ 15 ಎಂದು ಗುರುತುಪಡಿಸಿಕೊಳ್ಳಲಾಯಿತು. **VAO** ರವರು ನೀಡಿದ ವರದಿಯನ್ನು ನೋಡುತ್ತಿದ್ದೇನೆ. ಅದನ್ನು ನಿಪಿ 16 ಎಂದು ಗುರುತುಪಡಿಸಿಕೊಳ್ಳಲಾಯಿತು. ನ್ಯಾಯಾಲಯಕ್ಕೆ ನಾನು ನೀಡಿದ ನಿವೇದನೆಯನ್ನು ನೋಡುತ್ತಿದ್ದೇನೆ. ಅದರಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ನಿಪಿ 17 ಎಂತಲು , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 17(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**